ಆ) ಹಾಗಿದ್ದಲ್ಲಿ ಕರಾವಳಿ ತಾಲ್ಲೂಕುಗಳ ಮಧ್ಯ ಭಾಗದಲ್ಲಿರುವ ಕುಮುಟಾದಲ್ಲಿ ವಸತಿ ಶಾಲೆ ಮಂಜೂರಿ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮೂರು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ನಡೆಯುತ್ತಿವೆ.

1. ಮಾಗೋಡು ಫಾಲ್ಸ್ – ಹಿಂದುಳಿದ ವರ್ಗಗಳ ವಸತಿ ಶಾಲೆ (ಯಲ್ಲಾಪುರ ತಾಲ್ಲೂಕು)
2. ಮುಂಡಗೋಡು – ಪರಿಶಿಷ್ಟ ಜಾತಿ ವಸತಿ ಶಾಲೆ, (ಮುಂಡಗೋಡು ತಾಲ್ಲೂಕು)
3. ಸಿರ್ಸಿ – ಸಮಾನ್ಯ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ/ ಹಿಂದುಳಿದ ವರ್ಗಗಳ ವಸತಿ ಶಾಲೆ (ಸಿರ್ಸಿ ತಾಲ್ಲೂಕು)

ಈ ಮೂರು ವಸತಿ ಶಾಲೆಗಳಿಗೆ ಸರ್ಕಾರ ಮಂಜೂರಾತಿ ನೀಡಿರುವ ವಿದ್ಯಾರ್ಥಿಗಳ ಸಂಖ್ಯೆ ಒಟ್ಟು 750 ಆದರೆ, ಈ ಮೂರು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಹಾಲಿ ವಿದ್ಯಾಭ್ಯಾಸ ಮಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಒಟ್ಟು 564 ಮಾತ್ರ, ಇನ್ನೂ 186 ಸ್ಥಾನಗಳು ಖಾಲಿ ಇರುತ್ತವೆ.

ಆ) ಕುಮಟ ತಾಲ್ಲೂಕಿಗೆ ಯಾವುದೇ ವಸತಿ ಶಾಲೆ ಮಂಜೂರು ಮಾಡುವ ಪ್ರಸ್ತಾವನೆ ಇಲ್ಲ.

ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಹೆಡ್ ಬಂದರಿನಲ್ಲಿ ಮರೈನ್ ಲೈವ್ ಮ್ಯೂಸಿಯಂ ಸ್ಥಾಪನೆ

253 (280): ಶ್ರೀ ಮೋಹನ್ ಕೆ. ಶೆಟ್ಟಿ (ಕುಮುಟಾ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತ್ರಿವೆಂಡ್ರಂನಲ್ಲಿನ ಕೊಳಂ ಬೀಚ್‌ನಲ್ಲಿ ಕೇಂದ್ರೀಯ ಕಡಲ ಮತ್ಸ್ಯ ಶಾಸ್ತ್ರ ಸಂಶೋಧನಾಲಯವು ಮರೈನ್ ಲೈವ್ ಮ್ಯೂಸಿಯಂನ್ನು ಸ್ಥಾಪಿಸಿದ್ದು, ಇದು ಆ ಭಾಗದ ಪ್ರವಾಸೋದ್ಯಮಕ್ಕೆ ಆಕರ್ಷಣೀಯವಾಗಿದ್ದು, ಅದೇ ರೀತಿ ಮ್ಯೂಸಿಯಂನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸುವ ಆಲೋಚನೆ ಸರ್ಕಾರದ ಮುಂದಿದೆಯೇ; ಸ್ಥಾಪಿಸುವುದಿದ್ದರೆ ನೈಸರ್ಗಿಕ ಅನುಕೂಲವಿರುವ ಕುಮಟಾದ ಮುಖ್ಯ ಬಂದರನ್ನು ಏಕೆ ಬಳಸಿಕೊಳ್ಳಬಾರದು; ವಿವರ ನೀಡುವುದು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಅ) ಕಾರವಾರದಲ್ಲಿ ಈಗಾಗಲೇ ಸಾಗರ ಮತ್ಸ್ಯಾಲಯವನ್ನು ಸ್ಥಾಪಿಸಲಾಗಿದ್ದು, ಪುನ: ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಮತ್ಸ್ಯಾಲಯವನ್ನು ಸ್ಥಾಪಿಸುವ ಯಾವುದೇ ಯೋಜನೆ ಸರ್ಕಾರದ ಮುಂದಿರುವುದಿಲ್ಲ. ಯಾವುದೇ ಯೋಜನೆ ಇಲ್ಲದ ಕಾರಣ ಕುಮಟಾ ಮುಖ್ಯ ಬಂದರನ್ನು ಬಳಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ರೈತರಿಗೆ ಪರಿಹಾರ ನೀಡದಿರುವುದು

254 (283): ಶ್ರೀ ಮೋಹನ್ ಕೆ. ಶೆಟ್ಟಿ (ಕುಮುಟ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 30 ವರ್ಷಗಳ ಹಿಂದೆ ಕೆ ಐ ಎಡಿಬಿಯವರು ಕಾಸ್ಟಿಕ್ ಸೋಡಾ ಫ್ಯಾಕ್ಟರಿ ಸಲುವಾಗಿ ಕುಮುಟಾ ತಾಲ್ಲೂಕಿನ ಮಾದನಗೆರೆ ಹಾಗೂ ಸುತ್ತಮುತ್ತಲ ರೈತರಿಂದ 1800 ಎಕರೆಗೂ ಹೆಚ್ಚು